

ನಾನು ವರ್ಷದ 365 ದಿನವೂ ಕಾಲಿಗೆ ಚಕ್ರ ಕಟ್ಟಿಕೊಂಡು ತಿರುಗುತ್ತಿದ್ದೆ. ಕಷ್ಟವೆಂಬುದು ಆಕೆಯ ಬೆನ್ನುಬಿಡಲಿಲ್ಲ. ಒಮ್ಮೆ ನಾವುಳಿದುಕೊಂಡಿದ್ದ ಮನೆಯೇ ಸುಟ್ಟು ಹೋದಾಗ ಬರಿಗೈಯಲ್ಲಿ ನಿಲ್ಲಬೇಕಾಯಿತು.

ಕಲಾವಿದರನ್ನು ಕರೆದು, ಶಾಲು, ಹಣ್ಣು ಕೊಟ್ಟು ತಾವು ಗುರುತಿಸಿಕೊಳ್ಳುವ ಆಸೆ ಹೊತ್ತವರು ಮತ್ತೊಂದು ವಲಯದವರು. ಅವರ ಆಸೆಗಳನ್ನು ಈಡೇರಿಸಲು ನಮ್ಮಲ್ಲಿ ಸಮಯವಿರಬೇಕಲ್ಲ? ನಮ್ಮ ದುಡಿಮೆಯನ್ನು ಬದಿಗೊತ್ತಿ ಅಲ್ಲಿ ಸನ್ಮಾನ ಮಾಡಿಸಿಕೊಳ್ಳುತ್ತ ಕುಳಿತರೆ ಗತಿಯೇನು? ಆದರೆ, ವಿಚಾರ ವಿನಿಮಯ, ಸಂವಾದಗಳಿಗೆ ಆದ್ಯತೆ ಇರುವ ಕಡೆಗಳಲ್ಲಿ ನಾನು ಮುತುವರ್ಜಿಯಿಂದ ಭಾಗವಹಿಸಿದ್ದೇನೆ. 2012ರಲ್ಲಿ ಮಂಗಳೂರಿನಲ್ಲಿ ನಡೆದ 'ಅಖಿಲ ಭಾರತ ಯಕ್ಷಗಾನ ಸಮ್ಮೇಳನ'ದ ಅಧ್ಯಕ್ಷತೆ ವಹಿಸಿದ್ದೆ. ಉಡುಪಿಯಲ್ಲಿ 'ಗೋವಿಂದ ವೈಭವ ಸಪ್ತಾಹ'ವನ್ನೇ ಆಚರಿಸಿದ್ದರು. ಇವೆಲ್ಲ ಗೌರವಗಳನ್ನು ಪಡೆದು ಕೃತಜ್ಞನಾಗಿದ್ದೇನೆ.

◆ **ರಂಗಸ್ಥಳದಲ್ಲಿ ಮಾತ್ರವಲ್ಲ, ತಾಳಮದ್ದಳೆಯಲ್ಲಿಯೂ ನೀವು ಉತ್ತಮ ವಾಗ್ಮಿ...**

ಆಟಗಳಲ್ಲಿ ಮಾತು, ತರ್ಕಗಳಿಗೆ ಹೆಚ್ಚು ಅವಕಾಶವಿರುವುದಿಲ್ಲ. ಅಲ್ಲಿ ಕುಣಿತ, ಬಿರುಸು, ಓಘ ಎಲ್ಲದಕ್ಕೂ ಸಮಯ ವಿನಿಯೋಗಿಸಿಕೊಂಡು ಪ್ರದರ್ಶನವನ್ನು ನಿಭಾಯಿಸಬೇಕು. ತಾಳಮದ್ದಳೆಯಲ್ಲಿ ಮಾತಿಗೆ ಸಾಕಷ್ಟು ಅವಕಾಶವಿದೆ. ಹಿಂದೆಲ್ಲ ಉತ್ತರ ಕನ್ನಡ ಭಾಗದಲ್ಲಿ ತಾಳಮದ್ದಳೆಯಲ್ಲಿಯೂ ಕಲಾವಿದರು ತಕ್ಕಮಟ್ಟಿಗೆ ಅಭಿನಯ ಮಾಡುತ್ತಿದ್ದರು. ಮಾತಿನ ಬಿರುಸಿಗೆ ತಕ್ಕಂತೆ ಅವರ ಅಭಿನಯ ಇರುತ್ತಿತ್ತು. ಆದರೆ ಹೆಚ್ಚುಗಾರಿಕೆಯೇನೂ ಇರುತ್ತಿರಲಿಲ್ಲ. ಕುಂಭಕರ್ಣನನ್ನು ಎಬ್ಬಿಸುವುದು ಎಂದರೆ ಬೊಬ್ಬೆ ಹೊಡೆದು, ಅತ್ತಿತ್ತ ಓಡಾಡಿ ಎಚ್ಚರಿಸುವ ವಾಡಿಕೆಯಿತ್ತು. ಈಗ ಹಾಗೇನೂ ಇಲ್ಲ. ಅದೊಂದು ವಾಗ್ವಿಲಾಸ.

◆ **ಇತರ ಕಲಾಪ್ರಕಾರಗಳತ್ತಲೂ ನಿಮಗೆ ಒಲವಿತ್ತು...**

ಕಲಾವಿದನಿಗೆ ಕಲಾಪ್ರಕಾರಗಳು ಮಾಧ್ಯಮಗಳಷ್ಟೆ. ಅವನ ಕುತೂಹಲದ ಕಂಗಳು ಸದಾ ತೆರೆದಿರುತ್ತವೆ. ಭರತನಾಟ್ಯ, ಕಥಕ್ ನೃತ್ಯಗಳ ಒಳಸುಳಿಗಳನ್ನು ಅರಿಯಲು ನಾನು ಪ್ರಯತ್ನಿಸಿದ್ದೇನೆ. ಅವುಗಳನ್ನು ಕಲಿತುದರಿಂದ ನನ್ನ ತಾಳ-ಹೆಜ್ಜೆಯ ಜ್ಞಾನ ವೃದ್ಧಿಸಿದೆ. ಹಾಗೆ ನೋಡಿದರೆ, ಜಗತ್ತಿನ ಕಲಾಪ್ರಕಾರಗಳ ನಡುವೆ ಸಾಮ್ಯತೆಗಳು ಇದ್ದೇ ಇರುತ್ತವೆ ಎಂದು ಅನಿಸುತ್ತದೆ. ಒಮ್ಮೆ ಪುರುಷೋತ್ತಮ ಬಿಳಿಮಲೆಯವರ ನೇತೃತ್ವದಲ್ಲಿ